RNU AIR DHARWAD

AUGUST 29, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಧಾರವಾಡ ಐ.ಐ.ಟಿ. ಯಲ್ಲಿ,** ಧರ್ತಿ ಬಯೋನೆಸ್ಟ್ ಇನ್‌ಕ್ಯೂಬೇಷನ್ ಸೆಂಟರ್, 15 ಸ್ಟಾರ್ಟ್‌ಅಪ್ ಗಳೊಂದಿಗೆ, ಕಾರ್ಯಾರಂಭ.
- **ಜಲಮೂಲಗಳ ನಿರ್ವಹಣೆಗೆ,** ಕೃತಕ ಬುದ್ಧಿಮತ್ತೆ ಆಧಾರಿತ, 'ಡಿಜಿಟಲ್ ವಾಟರ್ ಸ್ಟಾಕ್' ಯೋಜನೆ.
- **ಬಂಡೀಪುರದಿಂದ ಬೀದರ್** ವರೆಗೆ, ಇಂದಿನಿಂದ 3 ದಿನಗಳ, 'ನಶೆ ಮುಕ್ತ ಭಾರತ' ದ್ವಿಚಕ್ರ ವಾಹನ ಜಾಥಾ.
- **'ಶಾಂತಿಯುತ ಸಮಾಜವನ್ನು ಉತ್ತೇಜಿಸಲು, ಕ್ರೀಡೆ',** ಧ್ಯೇಯದೊಂದಿಗೆ, ಇಂದು, ಭಾರತೀಯ ರಾಷ್ಟ್ರೀಯ ಕ್ರೀಡಾ ದಿನಾಚರಣೆ.

<><><>

**ಈಗ ವಾರ್ತೆಗಳ ವಿವರ**

<><><>

**ಧಾರವಾಡದ, ಭಾರತೀಯ ತಂತ್ರಜ್ಞಾನ ಸಂಸ್ಥೆ,** ಐ.ಐ.ಟಿ., ಅತ್ಯಾಧುನಿಕ ಧರ್ತಿ ಬಯೋನೆಸ್ಟ್ ಇನ್‌ಕ್ಯೂಬೇಷನ್ ಸೆಂಟರ್, ಆರಂಭಿಸಿದೆ. ಈಗಾಗಲೇ 15 ಸ್ಟಾರ್ಟ್‌ಅಪ್ ಉದ್ದಿಮೆಗಳು ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, 50 ಲಕ್ಷಕ್ಕೂ ಹೆಚ್ಚು ಅನುದಾನ ಪಡೆದುಕೊಂಡಿವೆ. ಮಾಲಿಕ್ಯೂಲರ್ ಬಯಾಲಜಿ, ಸೆಲ್ ಕಲ್ಚರ್ ಲ್ಯಾಬೊರೇಟರೀಸ್, ಪ್ರೋಟಿಯೋ ಮಿಕ್ಸ್, ಪ್ರೀ ಕ್ಲೀನಿಕಲ್ ವ್ಯಾಲಿಡೇಷನ್ ಲ್ಯಾಬ್, ಮೆಡ್‌ಟೆಕ್ ಪ್ರೋಟೊ ಟೈಪಿಂಗ್ ಮುಂತಾದ ಸ್ಟಾರ್ಟ್‌ಅಪ್‌ಗಳಿಗೆ, ಇದು ಮಾದರಿ ನೆಲೆಯಾಗಿದೆ. ಮುಂಬರುವ ದಿನಗಳಲ್ಲಿ, ಧರ್ತಿ ಫೌಂಡೇಷನ್, 100ಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳು, ಹಾಗೂ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಳ್ಳಲಿದೆ. ಕಿತ್ತೂರು ಹಾಗೂ ಕಲ್ಯಾಣ ಕರ್ನಾಟಕವನ್ನು, ಅಂತಾರಾಷ್ಟ್ರೀಯ ಮಟ್ಟದಲ್ಲಿ, ಜೈವಿಕ ತಂತ್ರಜ್ಞಾನ ಹಾಗೂ ಡೀಪ್ ಟೆಕ್ ಆವಿಷ್ಕಾರ ಕೇಂದ್ರವನ್ನಾಗಿ ರೂಪಿಸುವ ಗುರಿ, ಧಾರವಾಡ ಐ.ಐ.ಟಿ. ಹೊಂದಿದೆ.

<><><>

**ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ** ಮಾಹಿತಿ ನೀಡಿದ್ದಾರೆ, ಧಾರವಾಡ ಐ.ಐ.ಟಿ.ಯ ನಿರ್ದೇಶಕ ಪ್ರೊಫೆಸರ್ ವೆಂಕಪ್ಪಯ್ಯ ದೇಸಾಯಿ.

<><><>

**ವೆಂಕಪ್ಪಯ್ಯ ದೇಸಾಯಿ ಧ್ವನಿ 50 ಸೆಕೆಂದುಗಳು**

<><><>

**ಮಂಗಳೂರಿನಲ್ಲಿ ಸಚಿವ ಸಂಪುಟ ಸಭೆ ನಡೆಸಲು,** ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ, ಸಕಾರಾತ್ಮಕ ಪ್ರತಿಕ್ರಿಯೆ ನೀಡಿದ್ದಾರೆ ಎಂದು, ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ತಿಳಿಸಿದ್ದಾರೆ. ಮಂಗಳೂರಿನಲ್ಲಿ ಮಾತನಾಡಿದ ಅವರು, ಕೆಂಪು ಕಲ್ಲು ಗಣಿಗಾರಿಕೆಗೆ, ಸರ್ಕಾರ ಪರಿ ಷ್ಕೃತ ನಿಯಮಾವಳಿ ರೂಪಿಸಿದೆ. ಸೆಪ್ಟೆಂಬರ್ 4 ರಂದು, ವಿಜಯಪುರದಲ್ಲಿ ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ಸಿಗಲಿದೆ ಎಂದ ವಿಧಾನಸಭಾಧ್ಯಕ್ಷರು.. ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಶನ್, ಭಾರತೀಯ ಪ್ರಾದೇಶಿಕ ಸಮ್ಮೇಳನ, ಈ ಬಾರಿ ಬೆಂಗಳೂರಿನಲ್ಲಿ, ಸೆಪ್ಟೆಂಬರ್ 11 ರಿಂದ 14ರ ವರೆಗೆ ನಡೆಯಲಿದೆ. ಕಾಮನ್‌ವೆಲ್ತ್‌ನ 9 ದೇಶಗಳ ಸ್ಪೀಕರ್‌ಗಳು ಈ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರ ಮೇಲುಸ್ತುವಾರಿಯಲ್ಲಿ, ಈ ಸಮ್ಮೇಳನ ನಡೆಯಲಿದೆ ಎಂದು, ಯು.ಟಿ. ಖಾದರ್ ಹೇಳಿದರು.

<><><>

**ರಾಜ್ಯದ, ಜಲಮೂಲಗಳು** ಹಾಗೂ ನೀರಿನ ನಿರ್ವಹಣೆಯಲ್ಲಿ, ಪಾರದರ್ಶಕತೆ ಮತ್ತು ಹೊಣೆಗಾರಿಕೆ ಖಾತ್ರಿ ಪಡಿಸಲು, ಉಪಗ್ರಹ ಹಾಗೂ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಆಧಾರಿತ, 'ಡಿಜಿಟಲ್ ವಾಟರ್ ಸ್ಟಾಕ್' ಯೋಜನೆ ಅಳವಡಿಕೆಗೆ, ಚಿಂತನೆ ನಡೆದಿದೆ ಎಂದು, ಸಣ್ಣ ನೀರಾವರಿ ಖಾತೆ ಸಚಿವ, ಎನ್.ಎಸ್. ಬೋಸರಾಜು, ತಿಳಿಸಿದ್ದಾರೆ. ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ, ಪ್ರಮುಖ ಪಾತ್ರವಹಿಸಲಿದ್ದು, ಡಿಜಿಟಲ್ ವಾಟರ್ ಸ್ಟಾಕ್ ಮೂಲಕ, ರಾಜ್ಯ ಮಟ್ಟದ ನೀರು ನಿರ್ವಹಣೆ ಡ್ಯಾಶ್ ಬೋರ್ಡ್ ಮತ್ತು "ಮಾಸ್ಟರ್ ವಾಟರ್ ಅಟ್ಲಾಸ್" ರಚಿಸಲಾಗುವುದು. ಅಂತರ್ಜಲ ಮಟ್ಟ, ಮಳೆ ಪ್ರಮಾಣ, ನೀರಿನ ಗುಣಮಟ್ಟದ ದತ್ತಾಂಶ ಸಂಗ್ರಹಿಸಿ, ಜಲಮೂಲಗಳನ್ನು ವೈಜ್ಞಾನಿಕವಾಗಿ ನಿರ್ವಹಿಸಲು, ಸಾಧ್ಯವಾಗಲಿದೆ ಎಂದರು.

<><><>

**ಹುಬ್ಬಳ್ಳಿ–ಧಾರವಾಡ,** ಸ್ವಚ್ಛ ಹಾಗೂ ಸುಂದರ ನಗರವಾಗಿಸಲು, ಅಧಿಕಾರಿಗಳು ಮುಂಬರುವ ಎರಡು ತಿಂಗಳಲ್ಲಿ ಕ್ರಮವಹಿಸುವಂತೆ, ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ, ರಾಜ್ಯ ಸಮಿತಿಯ ಅಧ್ಯಕ್ಷ, ನಿವೃತ್ತ ನ್ಯಾಯಮೂರ್ತಿ, ಸುಭಾಷ ಆಡಿ, ಕಟ್ಟುನಿಟ್ಟಾಗಿ ಆದೇಶಿಸಿದ್ದಾರೆ. ಹುಬ್ಬಳ್ಳಿಯ ನಿರೀಕ್ಷಣಾ ಮಂದಿರದಲ್ಲಿ, ಘನ ತ್ಯಾಜ್ಯ, ಪಾರಂಪರಿಕ ತ್ಯಾಜ್ಯ, ಪ್ಲಾಸ್ಟಿಕ್ ತ್ಯಾಜ್ಯ, ಕಟ್ಟಡ ತ್ಯಾಜ್ಯ, ಜೀವ ವೈದ್ಯಕೀಯ ತ್ಯಾಜ್ಯ ನಿರ್ವಹಣೆ ನಿಯಮಗಳು 2016, ಮತ್ತು ಕೊಳಚೆ ನೀರು ಸಂಸ್ಕರಣಾ ಘಟಕ ನಿರ್ವಹಣೆ ಕುರಿತು, ರಾಷ್ಟ್ರೀಯ ಹಸಿರು ನ್ಯಾಯಪೀಠದ ಆದೇಶವನ್ನು ಅನು ಷ್ಠಾನಗೊಳಿಸಲು, ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಗ್ರಾಮ ಪಂಚಾಯಿತಿಗಳಲ್ಲಿ, ಹಸಿ ಕಸ ಮತ್ತು ಒಣ ಕಸವನ್ನು ಪ್ರತ್ಯೇಕವಾಗಿ ಸಂಗ್ರಹಿಸಬೇಕು. ಮಕ್ಕಳ ಗ್ರಾಮ ಸಭೆಗಳ ಮೂಲಕ, ಪಾಲಕರಲ್ಲಿ ಸ್ವಚ್ಛತೆ ಅರಿವು ಮೂಡಿಸಬೇಕು. ಶೇಕಡ 100 ರ ಷ್ಟು, ಸಮರ್ಪಕ ತ್ಯಾಜ್ಯ ನಿರ್ವಹಣೆ ಗುರಿ ಸಾಧನೆ ಕಡ್ಡಾಯ ಎಂದರು.

<><><>

**ಈಗ ಪ್ರಕಟಣೆ,**
**ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**
**(43 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_Kannada ಹಾಗೂ**

**ನಮ್ಮ ಫೇಸ್ಬುಕ್ ಖಾತೆ Akashvani RNU Bengaluru-Dharwad ಅನುಸರಿಸಿ.**

<><><>

**ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ಇನ್ನರ್ ವ್ಹೀಲ್ ಕ್ಲಬ್,**ನಗರದ ನಾಲ್ಕು ಕಡೆಗಳಲ್ಲಿ ಇಲೆಕ್ಟ್ರಾನಿಕ್ ತ್ಯಾಜ್ಯ ನಿರ್ವಹಣೆ ಅಭಿಯಾನ ಆಯೋಜಿಸಿದೆ. ಭೂ ಗ್ರಹವನ್ನು ಇಲೆಕ್ಟ್ರಾನಿಕ್ ತ್ಯಾಜ್ಯದಿಂದ ಮುಕ್ತಗೊಳಿಸಿ, ಪುನರ್‌ಬಳಕೆ ವಸ್ತುಗಳನ್ನು ತಯಾರಿಸಿ, ಇಂಗಾಲದ ಹೆಜ್ಜೆ ಗುರುತುಗಳನ್ನು ಅಳಿಸುವ ಉದ್ದೇಶದಿಂದ, ಈ ಆಂದೋಲನವನ್ನು ಜನಸಹಭಾಗಿತ್ವದಲ್ಲಿ ಆರಂಭಿಸಲಾಗಿದೆ. ಪ್ರದೇಶ ಸಮಾಚಾರಕ್ಕಾಗಿ ಈ ಕುರಿತು ಮಾಹಿತಿ ನೀಡಿದ್ದಾರೆ, ಸ್ಟ್ರಕ್ಚರಲ್ ಇಂಜಿನೀಯರ್ ಹಾಗೂ ಇನ್ನರ್ ವ್ಹೀಲ್ ಕ್ಲಬ್ ಕಾರ್ಯಾಧ್ಯಕ್ಷೆ ಸುಷ್ಮಾ ಹಿರೇಮಠ.

<><><>

**ಸುಷ್ಮಾ ಹಿರೇಮಠ ಧ್ವನಿ 50 ಸೆಕೆಂದುಗಳು**

<><><>

**‘ನಶೆ ಮುಕ್ತ ಭಾರತ’ ಅಭಿಯಾನದ ಅಂಗವಾಗಿ,** ಕೇಂದ್ರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ, ಇಂದಿನಿಂದ 31ರ ವರೆಗೆ, ಬಂಡೀಪುರದಿಂದ ಬೀದರ್ ವರೆಗೆ 3 ದಿನಗಳ, ದ್ವಿಚಕ್ರ ವಾಹನ ಜಾಥಾ ಆಯೋಜಿಸಿದೆ. ರಾಜ್ಯ ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ನವೀನ್‌ರಾಜ್ ಸಿಂಗ್, ಬೆಂಗಳೂರಿನಲ್ಲಿ ಮಾಹಿತಿ ನೀಡಿ, ಮದ್ಯಪಾನ ಮತ್ತು ಮಾದಕ ವಸ್ತು ಮುಕ್ತ ಸಮಾಜ ನಿರ್ಮಾಣಕ್ಕೆ ಪ್ರೇರಣೆ ನೀಡುವುದು, ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದರು. ರಾಷ್ಟ್ರೀಯ ಸೇವಾ ಯೋಜನೆ, ಎನ್.ಎಸ್.ಎಸ್. ಹಾಗೂ ನ್ಯಾಷನಲ್ ಕೆಡೆಟ್ ಕಾರ್ಪ್ಸ್ ಎನ್.ಸಿ.ಸಿ. ಸಹಯೋಗದಲ್ಲಿ, ಸಾರ್ವಜನಿಕರನ್ನೂ ಒಳಗೊಂಡ, 20 ಜನ ಬೈಕ್ ಸವಾರರು ಪಾಲ್ಗೊಳ್ಳಲಿದ್ದಾರೆ. ದೇಶಾದ್ಯಂತ ಒಂದು ಲಕ್ಷ ಕಿಲೋ ಮೀಟರ್‌ಗಳಿಗೂ ಹೆಚ್ಚು ಸೈಕ್ಲಿಂಗ್‌ನಲ್ಲಿ ಕ್ರಮಿಸಿರುವ, ರೈಡರ್ ನಂದಿನಿ ಮಿಥುನ್, ಈ ಜಾಥಾದಲ್ಲಿ ಪಾಲ್ಗೊಳ್ಳುತ್ತಿರುವುದು ವಿಶೇಷ ಎಂದು, ಅವರು ತಿಳಿಸಿದರು.

<><><>

**‘ಶಾಂತಿಯುತ ಸಮಾಜವನ್ನು ಉತ್ತೇಜಿಸಲು, ಕ್ರೀಡೆ’** ಎಂಬ ಧ್ಯೇಯದೊಂದಿಗೆ, ಭಾರತೀಯ ರಾಷ್ಟ್ರೀಯ ಕ್ರೀಡಾ ದಿನವನ್ನು, ಹಾಕಿ ದಂತಕಥೆ, ಮೇಜರ್ ಧ್ಯಾನ್‌ಚಂದ್ ಅವರ ಜನ್ಮ ದಿನವಾದ ಇಂದು, ಆಗಸ್ಟ್ 29 ರಂದು, ಆಚರಿಸಲಾಗುತ್ತಿದೆ. 1928, 1932 ಮತ್ತು 1936 ರಲ್ಲಿ, ಭಾರತಕ್ಕೆ ಒಲಿಂಪಿಕ್ಸ್‌ನಲ್ಲಿ, ಚಿನ್ನದ ಪದಕಗಳನ್ನು ಗೆದ್ದುಕೊಟ್ಟ, ಹಾಕಿ ಆಟಗಾರ, ಮೇಜರ್ ಧ್ಯಾನ್‌ಚಂದ್ ಸಿಂಗ್ ಅವರ, ಜನ್ಮದಿನವನ್ನು, ಭಾರತೀಯರಿಗೆ ನೆನಪಿಸುತ್ತದೆ. ಕ್ರೀಡೆ ಹಾಗೂ ಕ್ರೀಡಾ ಮನೋಭಾವ, ಒಗ್ಗಟ್ಟು ಮತ್ತು ತಂಡವನ್ನು ಬೆಳೆಸುವಲ್ಲಿ, ಕ್ರೀಡೆಯ ಪಾತ್ರವನ್ನು, ಫಿಟ್ ಇಂಡಿಯಾ ಮಿ ’ನ್ ಸಹಯೋಗದಲ್ಲಿ, ಇಂದಿನಿಂದ ಮೂರು ದಿನಗಳ ಕಾಲ, ರಾಷ್ಟ್ರವ್ಯಾಪಿ ಕಾರ್ಯಕ್ರಮವಾಗಿ, ಕ್ರೀಡಾ ಮನೋಭಾವ ದರ್ಶಿಸಲು ಆಯೋಜಿಸಲಾಗಿದೆ.

<><><>

**ಧಾರವಾಡದ ಕರ್ನಾಟಕ ಎಜ್ಯುಕೇಶನ್ ಬೋರ್ಡ್,** ‘ರಾಷ್ಟ್ರೀಯ ಕ್ರೀಡಾ ದಿನ’ದ ಅಂಗವಾಗಿ, ತನ್ನ ಅಂಗ ಸಂಸ್ಥೆಯ ವಿದ್ಯಾರ್ಥಿಗಳಿಗಾಗಿ, 5 ಹಾಗೂ 3 ಕಿಲೋ ಮೀಟರ್ ರಸ್ತೆ ಓಟದ ಸ್ಪರ್ಧೆಯನ್ನು, ಈ ಬೆಳಗ್ಗೆ 7.30ಕ್ಕೆ ಆಯೋಜಿಸಿದೆ.

<><><>

**ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,** ಇಂದು ಬೆಳಿಗ್ಗೆ 8 ಗಂಟೆಗೆ, ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ, ಅಥ್ಲೆಟಿಕ್ ಓಟ, ಡಿ.ಜಿ.ಹಳ್ಳಿಯ ಬಿ.ಆರ್. ಅಂಬೇಡ್ಕರ್ ಮಿನಿ ಫುಟ್ಬಾಲ್ ಕ್ರೀಡಾಂಗಣದಲ್ಲಿ, ಫುಟ್ಬಾಲ್ ಕ್ರೀಡಾಕೂಟ ಹಾಗೂ ಅಕ್ಕಿ ತಿಮ್ಮನಹಳ್ಳಿ ಕ್ರೀಡಾಂಗಣದಲ್ಲಿ, ಹಾಕಿ ಕ್ರೀಡಾಕೂಟವನ್ನು ಆಯೋಜಿಸಿದೆ.

<><><>

**ಆಕಾಶವಾಣಿಯ, ಬಹುಶ್ರುತ** ‘ಮನ್ ಕಿ ಬಾತ್’ ಕಾರ್ಯಕ್ರಮದಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ನಾಡಿದ್ದು 31 ರಂದು, ಬೆಳಗ್ಗೆ 11 ಗಂಟೆಗೆ, ದೇಶ, ವಿದೇಶಗಳ ಭಾರತೀಯರೊಂದಿಗೆ ತಮ್ಮ ಮನದ ಮಾತುಗಳನ್ನು ಹಂಚಿಕೊಳ್ಳಲಿದ್ದಾರೆ. ಇದು

ಮನ್ ಕಿ ಬಾತ್‌ನ 125ನೇ ಆವೃತ್ತಿಯಾಗಿದೆ. ಜನತೆ ತಮ್ಮ ಸಲಹೆಗಳು ಹಾಗೂ ಅಭಿಪ್ರಾಯಗಳನ್ನು, ಇಂದು ರಾತ್ರಿ ಒಳಗೆ, ನಮೋ ಆಪ್, My Gov.in ಜಾಲತಾಣ ಅಥವಾ ಟೋಲ್ ಫ್ರೀ ಸಂಖ್ಯೆ 1800–11–7800 ಗೆ ಕರೆ ಮಾಡಿ, ತಮ್ಮ ಸಂದೇಶ ಹಂಚಿಕೊಳ್ಳುವಂತೆ, ಪ್ರಧಾನಮಂತ್ರಿ ಕೋರಿದ್ದಾರೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಧಾರವಾಡ ಐ.ಐ.ಟಿ. ಯಲ್ಲಿ,** ಧರ್ತಿ ಬಯೋನೆಸ್ಟ್ ಇನ್‌ಕ್ಯೂಬೇಷನ್ ಸೆಂಟರ್, 15 ಸ್ಟಾರ್ಟ್‌ಅಪ್ ಗಳೊಂದಿಗೆ, ಕಾರ್ಯಾರಂಭ.
- **ಜಲಮೂಲಗಳ ನಿರ್ವಹಣೆಗೆ,** ಕೃತಕ ಬುದ್ಧಿಮತ್ತೆ ಆಧಾರಿತ, 'ಡಿಜಿಟಲ್ ವಾಟರ್ ಸ್ಟಾಕ್' ಯೋಜನೆ.
- **ಬಂಡೀಪುರದಿಂದ, ಬೀದರ್** ವರೆಗೆ, ಇಂದಿನಿಂದ 3 ದಿನಗಳ, 'ನಶೆ ಮುಕ್ತ ಭಾರತ' ದ್ವಿಚಕ್ರ ವಾಹನ ಜಾಥಾ.
- **'ಶಾಂತಿಯುತ ಸಮಾಜವನ್ನು ಉತ್ತೇಜಿಸಲು, ಕ್ರೀಡೆ',** ಧ್ಯೇಯದೊಂದಿಗೆ, ಇಂದು, ಭಾರತೀಯ ರಾಷ್ಟ್ರೀಯ ಕ್ರೀಡಾ ದಿನಾಚರಣೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>